# ಅಂಬಾ ಶಿವ ಶಂಕರೀ

ಅಂಬಾ ಶಿವ ಶಂಕರೀ
ಜಗದಂಬಾ ಪರಮೇಶ್ವರೀ

ಅಂಬಾ ಮೂಕಾಂಬಾ ಹೇರಂಬಾ ಜನನಿಯೇ
ಅಂಬಾ ಮೂಕಾಂಬಾ ಹೇರಂಬಾ ಜನನಿ
ಸೂರ್ಯಬಿಂಬೇ ಸೌರಂ·ಬೇ ನಾ ನಂಬಿದರುವೇ
ಶಾರದಾಂಬಾ ಶಿವಶಂಕರೀ

ಗೌರೀ ಹರಿ ಸೋದರೀ ಭಯ ದೂರಿ
ಕರುಣಾಕರೀ
ತೀರೋ ಓಂಕಾರೇ ವಿಸ್ತಾರೇ ಮುನ್ದಿನ ದಾರೀ
ತೋರೇ ನಿಸ್ತಾರೇ ಗಂಭೀರೇ ವಂದಿಪೇ
ಶಾರದಾಂಬಾ ಶಿವ ಶಂಕರೀ

ದಾಸಾತ್ಮಕೇ ಶಾಂಭವೀ ವರ ಪಾದಾತ್ಮಕೇ
ಭೈರವೀ
ವಾದಾ ಕೈಲಾಸಾ ಗಿರೀಶ ನಂಬಿದೇ ನಿನ್ನ
ಈಶ ಸರ್ವೇಶ ಪರಮೇಶನ ಪ್ರಿಯ
ಶಾರದಾಂಬಾ ಶಿವ ಶಂಕರೀ

ಶಾಂತೇ ಜಯಭಾರತೀ ಗುಣವಂತೇ
ನಿನಗಾರತೀ
ಸಂತತ ನೆಂದೆ ನನ್ನ ಅಂತರಂಗದೊಳು ನೀ
ಕಾಂತೇ ವೇದಾಂತೇ ನಿಶ್ಚಿಂತೇ ಶಾರದಾ ಮಾತೇ
ಅಂಬಾ ಶಿವ ಶಂಕರೀ

ಅಂಬಾ ಮೂಕಾಂಬಾ ಹೇರಂಬಾ ಜನನಿಯೇ
ಅಂಬಾ ಮೂಕಾಂಬಾ ಹೇರಂಬಾ ಜನನಿ
ಸೂರ್ಯಬಿಂಬೇ ಸೌರಂಬೇ ನಾ ನಂಬಿದರುವೇ
ಶಾರದಾಂಬಾ ಶಿವಶಂಕರೀ

ಅಂಬಾ ಶಿವಶಂಕರೀ
ಜಗದಂಬಾ ಪರಮೇಶ್ವರೀ